# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 07.06.2024 ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2024ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಗಳು.

ಉಪಸ್ಥಿತರು:

| | | | |
|---|---|---|---|
| 1. | ಪ್ರೊ. ಪಿ.ಎಲ್. ಧರ್ಮ<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ರಾಮೇಗೌಡ ಎಂ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಪ್ರೊ. ಎಂ. ಜಯಶಂಕರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು | |
| 4. | ಡಾ. ಎಸ್. ಬಿ. ಎಂ. ಪ್ರಸನ್ನ | ಸದಸ್ಯರು | |
| 5. | ಡಾ. ಕೆ. ಸಿ. ಮಹದೇಶ | ಸದಸ್ಯರು | |
| 6. | ಶ್ರೀ ಕೃಷ್ಣಪ್ರಸಾದ್ ಕೆ. ಎನ್. | ಸದಸ್ಯರು | |
| 7. | ಡಾ. ವರದರಾಜ ಸಿ.ಎಚ್ | ಸದಸ್ಯರು | |
| 8. | ಫಾದರ್ ಮೈಕಲ್ ಸಂತುಮಯೋರ್ | ಸದಸ್ಯರು | |
| 9. | ಡಾ. ಜೋಶ್ನ ರಾವ್. ಕೆ | ಸದಸ್ಯರು | |
| 10. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು | |
| 11. | ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ, . | ಸದಸ್ಯರು | |
| 12. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು | |
| 13. | ಶ್ರೀ ರಘುರಾಜ್ | ಸದಸ್ಯರು | ಆನ್ ಲೈನ್ ಮೂಲಕ ಹಾಜರಾತಿ |
| 14. | ಶ್ರೀ ಅಚ್ಯುತ ಗಟ್ಟಿ | ಸದಸ್ಯರು | |
| 15. | ಶ್ರೀ ಮೊಹಮ್ಮದ್ ಸವಾದ್ | ಸದಸ್ಯರು | |
| 16. | ಡಾ. ಸಿಪ್ರಿಯನ್ ಮೊಂತೆರೊ<br>ಪ್ರಾಂಶುಪಾಲರು, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ<br>(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 17. | ಡಾ. ದೇವೇಂದ್ರಪ್ಪ. ಹೆಚ್ | ಸದಸ್ಯರು | |
| 18. | ಪ್ರೊ. ವೈ. ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |

19. ಶ್ರೀ ಕೆ. ರಾಜು ಮೊಗವೀರ, ಕೆ.ಎ.ಎಸ್., ಸದಸ್ಯ ಕಾರ್ಯದರ್ಶಿ
ಕುಲಸಚಿವರು

**ಅನುಪಸ್ಥಿತರು:**

ಡಾ. ಸಂದೇಶ್ ಕೆ. ಎಸ್ ಸದಸ್ಯರು
ಕುಲಸಚಿವರು,
ಕೆ.ವಿ.ಜಿ. ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಸುಳ್ಯ
ವೈದ್ಯಕೀಯ ಶಿಕ್ಷಣ ನಿರ್ದೇಶಕರು,
(ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರ
ಪರವಾಗಿ)

## ಪ್ರಾರಂಭಿಕ

ಪ್ರಾರಂಭದಲ್ಲಿ ಹಣಕಾಸು ಅಧಿಕಾರಿಯವರು ನೂತನ ಕುಲಪತಿಯವರಾದ ಪ್ರೊ. ಪಿ. ಎಲ್. ಧರ್ಮ ಹಾಗೂ ಕುಲಸಚಿವರು (ಆಡಳಿತ) ಶ್ರೀ ಕೆ. ರಾಜು ಮೊಗವೀರ ಕೆ.ಎ.ಎಸ್., ಕುಲಸಚಿವರು(ಪರೀಕ್ಷಾಂಗ) ಡಾ. ದೇವೆಂದ್ರಪ್ಪ ಹೆಚ್ ಹಾಗೂ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಡಾ. ಜೋಶ್ನ ರಾವ್ ಕೆ ಇವರುಗಳನ್ನು ಮತ್ತು ಇತರ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಕುಲಪತಿಯವರು ಸಿಂಡಿಕೇಟಿನ ಎಲ್ಲಾ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ ಪ್ರಭಾರ ಕುಲಪತಿಗಳಾಗಿ ನೇಮಕಗೊಂಡಿದ್ದ ಪ್ರೊ. ಜಯರಾಜ್ ಅಮೀನ್, ಪ್ರಭಾರ ಕುಲಸಚಿವರು(ಆಡಳಿತ) ರಾಗಿ ನೇಮಕಗೊಂಡಿದ್ದ ಶ್ರೀ ರಾಜು ಕೆ. ಕೆ.ಎ.ಎಸ್., ಇವರುಗಳನ್ನು ಹುದ್ದೆಯ ಪ್ರಭಾರದಿಂದ ಬಿಡುಗಡೆಗೊಳಿಸಿರುವ ಬಗ್ಗೆ ಸಭೆಗೆ ತಿಳಿಸಿದರು. ಕುಲಸಚಿವರು(ಪರೀಕ್ಷಾಂಗ)ರಾಗಿ ಕಾರ್ಯ ನಿರ್ವಹಿಸಿರುವ ಪ್ರೊ. ರಾಜು ಕೃಷ್ಣ ಚಲಣ್ಣವರ್ ಇವರನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಇಡಿ 08 ಯುಡಿವಿ 2024, ದಿನಾಂಕ 22.02.2024 ರಂತೆ ಕುಲಸಚಿವ(ಪರೀಕ್ಷಾಂಗ)ರ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಬಗ್ಗೆ ಸಭೆಗೆ ತಿಳಿಸಿದರು. ಶ್ರೀಮತಿ ಸಮೀರ ಕೆ.ಎ., ಪ್ರಾಂಶುಪಾಲರು, ಏಮ್ಸ್ ಪ್ರಥಮ ದರ್ಜೆ ಕಾಲೇಜು, ಕಡಬ ಇವರ ಸದಸ್ಯತ್ವದ ಅವಧಿಯು ದಿನಾಂಕ 29.02.2024 ರಂದು ಕೊನೆಗೊಂಡಿರುವುದರಿಂದ ಸದರಿಯವರನ್ನು ಸಿಂಡಿಕೇಟ್ ಸದಸ್ಯತ್ವದಿಂದ ಮುಕ್ತಗೊಳಿಸಿರುವ ವಿಷಯವನ್ನು ತಿಳಿಸುತ್ತಾ ಇವರೆಲ್ಲರೂ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿದ್ದು, ಇವರೆಲ್ಲರಿಗೂ ಸಿಂಡಿಕೇಟಿನ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಚುನಾವಣಾ ನೀತಿ ಸಂಹಿತೆಯ ಹಿನ್ನಲೆಯಲ್ಲಿ ಕಳೆದ ಎರಡೂವರೆ ತಿಂಗಳ ಅವಧಿಯಲ್ಲಿ ಸಿಂಡಿಕೇಟ್ ಸಭೆಗಳು ನಡೆಯದೇ ಇರುವ ಕಾರಣ ಆ ಅವಧಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಘಟಿಸಿದ ಈ ಕೆಳಕಂಡ ವಿಷಯಗಳನ್ನು ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು.

1. ಇತ್ತೀಚೆಗೆ ವಿಶ್ವವಿದ್ಯಾನಿಲಯಕ್ಕೆ AAA ಕಮಿಟಿ ಎಲ್ಲಾ ವಿಭಾಗಗಳಿಗೂ ಭೇಟಿ ನೀಡಿ ಪರಿಶೀಲಿಸಿದ್ದು, ಸದರಿ ಕಮಿಟಿಯ ಸದಸ್ಯರು ವಿಭಾಗವಾರು ನೀಡಿರುವ ಸಲಹೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರ ಸಭೆ ಕರೆದು ಚರ್ಚಿಸಿ ಸಮಿತಿಯ ಸಲಹೆಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿದೆ.
2. ಕೇಂದ್ರ ಸರ್ಕಾರದ PMUSHA ಯೋಜನೆಯಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ರೂ.20.00 ಕೋಟಿ ಅನುದಾನ ಮಂಜೂರಾಗಿದ್ದು, ಇದರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸಂಶೋಧನಾ ಕಾರ್ಯಗಳಿಗೆ ಉತ್ತೇಜನ ದೊರಕಿದಂತಾಗಿದೆ.
3. ಇ-ಗವರ್ನೆನ್ಸನ್ನು ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಪೂರಕವಾಗಿ ಅಳವಡಿಸಿಕೊಂಡಿರುವ ಬಗ್ಗೆ ಕರ್ನಾಟಕ ಸರ್ಕಾರವು ಪ್ರಶಸ್ತಿ ನೀಡಿದೆ. ಅಲ್ಲದೇ ಇದಕ್ಕಾಗಿ ಪ್ರೊತ್ಸಾಹ ಧನವಾಗಿ ರೂ. 50.00 ಲಕ್ಷಗಳ ವಿಶೇಷ ಅನುದಾನವನ್ನು ಸಹ ನೀಡಿದೆ. ಇ-ಗವರ್ನೆನ್ಸ್ ವಿಸ್ತರಣೆಗಾಗಿ ಈ ಅನುದಾನವನ್ನು ಬಳಸಿಕೊಳ್ಳಲಾಗುವುದು.
4. ವಿಶ್ವವಿದ್ಯಾನಿಲಯದ ಆರ್ಥಿಕ ಮುಗ್ಗಟ್ಟಿನ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ 432 ನಿವೃತ್ತ ಸಿಬ್ಬಂದಿಗಳ ಪೆನ್ಷನ್ ಅದಾಲತ್ ಸಭೆ ನಡೆಸಿ, ಅವರಿಂದ ಸಹಕಾರವನ್ನು ಕೋರಲಾಗಿದೆ.
5. ಅವೈಜ್ಞಾನಿಕವಾಗಿ ತಾತ್ಕಾಲಿಕ/ಗುತ್ತಿಗೆ ಆಧಾರದಲ್ಲಿ ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡು ಆರ್ಥಿಕ ಹೊರೆಯಾಗಿದ್ದ, ಹೆಚ್ಚುವರಿ ಸಿಬ್ಬಂದಿಗಳ ಸೇವೆಯನ್ನು ಕಡಿತಗೊಳಿಸಲಾಗಿದ್ದು ವಿಶ್ವವಿದ್ಯಾನಿಲಯದಲ್ಲಿ ಆರ್ಥಿಕ ಮಿತವ್ಯಯ ಸಾಧಿಸಲು ಸಾಕಷ್ಟು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ.
6. ವಿದ್ಯಾರ್ಥಿಗಳ ವಸತಿ ನಿಲಯ ವಾರ್ಡನ್ ರಾಗಿ ಡಾ. ಮೋಹನ್ ಸಿಂಘೆ ಇವರನ್ನು ನೇಮಕ ಮಾಡಲಾಗಿದ್ದು, ವಸತಿ ಗೃಹಗಳ ಶುಚಿತ್ವ ಹಾಗೂ ಶುಚಿಯಾದ ಉತ್ತಮ ಗುಣಮಟ್ಟದ ಆಹಾರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.
7. ಆರ್ಥಿಕ ಮಿತವ್ಯಯ ಸಾಧಿಸುವ ಸಲುವಾಗಿ ಸಿಬ್ಬಂದಿಗಳನ್ನು ಆಂತರಿಕವಾಗಿ ನಿಯುಕ್ತಿಗೊಳಿಸಲಾಗಿದೆ. ಅಲ್ಲದೆ ಪ್ರೊ. ಗಣೇಶ್ ಸಂಜೀವ್, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಪ್ರೊ. ಎ.ಎಂ. ಖಾನ್, ನಿರ್ದೇಶಕರು, ಗಣಕಯಂತ್ರ ಕೇಂದ್ರ, ಪ್ರೊ. ಪ್ರಶಾಂತ್ ನಾಯ್ಕ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮ ಪಾಲನೆ ಯಾಗಿ ನೇಮಿಸಿ ಹೆಚ್ಚುವರಿ ಪ್ರಭಾರವನ್ನು ನೀಡಲಾಗಿದೆ.

8. ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿಯ ನೀಡಲು ಅನುವಾಗುವಂತೆ ಜೇಷ್ಠತಾ ಪಟ್ಟಿ ಮರುಪರಿಶೀಲಿಸಲು ಅಂತರಿಕ ಸಮಿತಿ ರಚಿಸಿದ್ದು, ಸಮಿತಿ ತಯಾರಿಸಿದ ಪಟ್ಟಿಯನ್ನು ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗ ಇಲಾಖೆ/ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದು ಮುಂಬಡ್ತಿ ನೀಡಲು ಸಿಂಡಿಕೇಟಿಗೆ ಮಂಡಿಸಲಾಗುವುದು.

9. ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಹಾಗೂ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರುಗಳನ್ನು ಮೂರು ಬಾರಿ ಭೇಟಿಯಾಗಿ ವಿಶ್ವವಿದ್ಯಾನಿಲಯದ ಆರ್ಥಿಕ ಸ್ಥಿತಿಯನ್ನು ಮನವರಿಕೆ ಮಾಡಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಆರ್ಥಿಕ ಮಿತವ್ಯಯ ಸಾಧಿಸಲು ಸೂಚಿಸಿದ್ದು, ಅದರಂತೆ ಅನುಷ್ಠಾನಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

10. ಡಾ. ಅನುಸೂಯ ರೈ, ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರು ವಯೋನಿವೃತ್ತಿ ಹೊಂದಿದ್ದು, ಕಾಲೇಜಿನ ಆಡಳಿತದ ಹಿತದೃಷ್ಠಿಯಿಂದ ಜೇಷ್ಠತೆಯಲ್ಲಿದ್ದ ಪ್ರೊ. ಗಣಪತಿ ಗೌಡ ಇವರನ್ನು ತಾತ್ಕಾಲಿಕವಾಗಿ ಪ್ರಭಾರ ಪ್ರಾಂಶುಪಾಲರನ್ನಾಗಿ ನೇಮಿಸಲಾಗಿದೆ.

11. ಸಂಶೋಧನೆಗೆ ಹಾಗೂ ಶೈಕ್ಷಣಿಕ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ Cardiff Metropolitan University Wales ಇವರೊಂದಿಗೆ ಮಂಗಳೂರು ವಿಶ್ವವಿದ್ಯಾನಿಲಯವು ಒಡಂಬಡಿಕೆಯನ್ನು ಮಾಡಿಕೊಂಡಿದೆ. Faculty Exchange ಸೇರಿದಂತೆ ಪರಸ್ಪರ ತಂತ್ರಜ್ಞಾನ ಅಭಿವೃದ್ಧಿಗೆ ಇದರಿಂದ ಸಹಾಯಕವಾಗುತ್ತದೆ.

12. ಮಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವವನ್ನು ದಿನಾಂಕ 15.06.2024 ರಂದು ನಡೆಸಲು ಮಾನ್ಯ ಕುಲಾಧಿಪತಿಗಳು ದಿನ ಗೊತ್ತುಪಡಿಸಿದ್ದು, ಮಾನ್ಯ ಸಹ ಕುಲಾಧಿಪತಿಗಳು ಹಾಗೂ ಮುಖ್ಯ ಅತಿಥಿಗಳು ಸದರಿ ದಿನಾಂಕದಂದು ಆಗಮಿಸಲು ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಆದುದರಿಂದ ದಿನಾಂಕ 15.06.2024 ರಂದು ಮಂಗಳೂರು ವಿಶ್ವವಿದ್ಯಾನಿಲಯದ 42ನೇ ವಾರ್ಷಿಕ ಘಟಿಕೋತ್ಸವ ನಡೆಯಲಿರುವುದಾಗಿ ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಿದರು.

**I. ನಡವಳಿಯ ದೃಢೀಕರಣ**

ದಿನಾಂಕ 23.02.2024 ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ

- ದೃಢೀಕರಿಸಿದೆ.

II. **ಅನುಸರಣಾ ವರದಿಯ ಅನುಮೋದನೆ.**

ದಿನಾಂಕ 05.02.2024 ರಂದು ನಡೆದ ಸಿಂಡಿಕೇಟಿನ 2024 ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

- ಅನುಮೋದಿಸಲಾಯಿತು.

III. **ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು**

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ: ಸಾ.ಸ 2:1(2024)**

**ವಿಷಯ:** 42ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ: ಸಾ.ಸ 2:2(2024)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 42ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲಿರುವ ಚಿನ್ನದ ಪದಕಗಳ ತಯಾರಿಕಾ ವೆಚ್ಚಕ್ಕೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ: ಸಾ.ಸ 2:3(2024)**

**ವಿಷಯ:** ಪಿಹೆಚ್.ಡಿ ಪದವಿ ಪ್ರದಾನ ಮಾಡಿದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:** **ಎ.ಸಿ.ಸಿ: ಸಾ.ಸ 2:4(2024)**

**ವಿಷಯ:** Dr. Azizuddin Sultani ಇವರಿಗೆ Post Doctoral Fellowship ನೀಡುವ ಬಗ್ಗೆ

**ನಿರ್ಣಯ:** ಪ್ರಸ್ತುತ ವಿಷಯವನ್ನು ಡೀನರುಗಳ ನೇತೃತ್ವದ ಸಮಿತಿ ಸಭೆಗೆ ವಹಿಸಿ, ಯುಜಿಸಿ ನಿಯಮಾವಳಿಯಂತೆ ಕ್ರಮವಹಿಸಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಪ.ಜಾ.ಪ.ಪಂ.ಘಟಕ: ಸಾ.ಸ 2:5(2024)**

**ವಿಷಯ:** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಘಟಕಗಳ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ನಿರ್ಣಯ:** ಈಗಾಗಲೇ ಪಿಹೆಚ್.ಡಿ ಮಾರ್ಗಸೂಚಿಗಳನ್ನು ವಿಶ್ವವಿದ್ಯಾನಿಲಯವು ತಯಾರಿಸಿದ್ದು, ಸದರಿ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಕ್ರಮವಹಿಸುವಂತೆ ನಿರ್ದೇಶಿಸಲು ನಿರ್ಣಯಿಸಲಾಯಿತು

**ಕಾರ್ಯಸೂಚಿಸಂಖ್ಯೆ:** **ಡಿಇವಿ: ಸಾ.ಸ 2:6(2024)**

**ವಿಷಯ:** 2022-23ನೇ ಸಾಲಿನ Annual Quality Assurance Report (AQAR) ಮತ್ತು Feed back ವರದಿಗಳ ಅನುಮೋದನೆಯ ಬಗ್ಗೆ.

**ನಿರ್ಣಯ:** IQAC ವಿಭಾಗದಿಂದ ಪ್ರತಿ ತಿಂಗಳ ಮುಖ್ಯಾಂಶ ವರದಿಯನ್ನು ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯದೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ:** **ಡಿಇವಿ: ಸಾ.ಸ 2:7(2024)**

**ವಿಷಯ:** ಘಟಕ ಕಾಲೇಜುಗಳ ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯವೈಖರಿಯ ಪರಿನಿಯಮ ರಚನೆ ಬಗ್ಗೆ.

**ನಿರ್ಣಯ:** ಘಟಕ ಕಾಲೇಜುಗಳ ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯವೈಖರಿಯ ಪರಿನಿಯಮ ಪದದ ಬದಲಾಗಿ "ಘಟಕ ಕಾಲೇಜುಗಳ ಕಾಲೇಜು ಅಭಿವೃದ್ಧಿ ಸಲಹಾ ಸಮಿತಿಯ ಕಾರ್ಯವೈಖರಿಯ ಮಾರ್ಗಸೂಚಿ ರಚನೆ" ಎಂಬ ಪದಗಳನ್ನು ಬಳಸುವ ನಿರ್ಣಯದೊಂದಿಗೆ ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:** **ಸಿಡಿಸಿ: ಸಾ.ಸ 2:8(2024)**

**ವಿಷಯ:** ಶೈ.ವ. 2024-25ನೇ ಸಾಲಿಗೆ ಹೊಸ/ ವಿಸ್ತರಣಾ/ ಮುಂದುವರಿಕೆ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆಯ ಮುಂದುವರಿಕೆ ಸಂಯೋಜನೆ ಬಗ್ಗೆ ಕಾಲೇಜುಗಳ/ವಿದ್ಯಾಸಂಸ್ಥೆಗಳ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ.

**ನಿರ್ಣಯ:** ಈಗಾಗಲೇ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿದ ಕಾಲೇಜುಗಳ ಮಾಹಿತಿಯನ್ನು ಸಿಂಡಿಕೇಟು ಸದಸ್ಯರ ಗಮನಕ್ಕೆ ಕೂಡಲೇ ತರುವಂತೆ ಹಾಗೂ ಮುಂದೆ ಭೇಟಿ ನೀಡಲಿರುವ ಸ್ಥಳೀಯ ವಿಚಾರಣಾ ಸಮಿತಿಯಲ್ಲಿ ಕಳೆದ ಶೈಕ್ಷಣಿಕ ಸಾಲಿನಲ್ಲಿ ಇದ್ದಂತೆ ಸಿಂಡಿಕೇಟು ಸದಸ್ಯರನ್ನು ಸೇರಿಸಿ ಪುನರ್ ರಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ: ಸಾ.ಸ 2:9(2024)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳನ್ನು ಕಾಲೇಜು ಶಿಕ್ಷಣ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

| | |
|---|---|
| **ನಿರ್ಣಯ:** | ಸರ್ಕಾರದಿಂದ ಅನುಮೋದಿತವಲ್ಲದ (ಪರಿನಿಯಮ ಅನುಮೋದನೆ ಇರುವುದಿಲ್ಲ) ಮಂಗಳೂರು ವಿಶ್ವವಿದ್ಯಾನಿಲಯದ ನಾಲ್ಕು ಘಟಕ ಕಾಲೇಜುಗಳನ್ನು ಕಾಲೇಜು ಶಿಕ್ಷಣ ಇಲಾಖೆ/ಸರಕಾರದ ಅನುದಾನದಿಂದ ನಡೆಸುವ ಬಗ್ಗೆ ವಿಸ್ತೃತವಾದ ವರದಿಯನ್ನು ರಚಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | **ಡಿಇವಿ: ಸಾ.ಸ 2:10(2024)** |
| **ವಿಷಯ:** | M/s D-Vois Communications Pvt. Ltd, Bangalore ಸಂಸ್ಥೆಯ M/s Antariksh Softtech Private Limited Bangalore ಎಂಬ ಸಂಸ್ಥೆಯೊಂದಿಗೆ ವಿಲೀನಗೊಂಡಿರುವ ಬಗ್ಗೆ. |
| **ನಿರ್ಣಯ:** | ನೂತನ ಸಂಸ್ಥೆಯ ಹೆಸರಿನಲ್ಲಿ ವಿಶ್ವವಿದ್ಯಾನಿಲಯದಿಂದ ಬಾಕಿಯಿರುವ ಮೊತ್ತವನ್ನು ಪಾವತಿಸಲು ನಿರ್ಣಯಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | **ಡಿಇವಿ: ಸಾ.ಸ 2:11(2024)** |
| **ವಿಷಯ:** | ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ NME - ICT ಯೋಜನೆಯಡಿ ಭಾರತ ಸಂಚಾರ ನಿಗಮ(ಲಿ) (BSNL) ನಿಂದ 1 Gbps Internet Connectivity ಯ ಶುಲ್ಕ ಪಾವತಿ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು |
| **ಕಾರ್ಯಸೂಚಿ ಸಂಖ್ಯೆ:** | **ಆಡಳಿತ ಸಾ.ಸ 2:12(2024)** |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಛೇರಿಯಲ್ಲಿರುವ DX2430 ಡುಪ್ಲೋಯಂತ್ರಗಳಿಗೆ ಅಗತ್ಯವಿರುವ ಮಾಸ್ಟರ್ ರೋಲ್ ಹಾಗೂ ಇಂಕ್‌ಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಧಾರಣಾಗುತ್ತಿಗೆ ದರ ನಿಗದಿಪಡಿಸುವ ಕುರಿತು, |
| ನಿರ್ಣಯ: | ಅನುಮೋದಿಸಲಾಯಿತು |
| **ಕಾರ್ಯಸೂಚಿ ಸಂಖ್ಯೆ:** | **ಆಡಳಿತ: ಸಾ.ಸ 2:13(2024)** |
| ವಿಷಯ: | 2023-24ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಕಛೇರಿಗಳ ಸ್ನಾತಕೋತ್ತರ ಕೇಂದ್ರಗಳ ಮತ್ತು ಘಟಕ ಕಾಲೇಜುಗಳಿಗೆ ಅಗತ್ಯವಿರುವ ಕಂಪ್ಯೂಟರ್ ಪ್ರಿಂಟರ್‌ಗಳಿಗೆ ಕಂಪ್ಯೂಟರ್ ಸ್ಟೇಷನರಿ (ಲೇಸರ್ ಜೆಟ್ ಟೋನರ್ ಮತ್ತು ಇಂಕ್ ಜೆಟ್ ಕಾರ್ಟ್ರೇಡ್ಜ್) |

ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ: ಸಾ.ಸ 2:14(2024)**

ವಿಷಯ: 2023-24ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಅಗತ್ಯವಿರುವ ಪರೀಕ್ಷಾ ನಮೂನೆ/ಲಕೋಟೆ/ಲೇಖನ ಸಾಮಾಗ್ರಿಗಳನ್ನು ಇಂ-ಟೆಂಡರ್‌ನಲ್ಲಿ ನಮೂದಿಸಿದ ಸಂಖ್ಯೆಗಿಂತ ಹೆಚ್ಚುವರಿ ಖರೀದಿಸಿದ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ: ಸಾ.ಸ 2:15(2024)**

ವಿಷಯ: ಅಂಕಪಟ್ಟಿ ಮತ್ತು ಲೆಡ್ಜರ್ ವಹಿಗಳ ಮುದ್ರಣಕ್ಕಾಗಿ ಪ್ರಿಂಟರ್‌ನ್ನು ಬಾಡಿಗೆಗೆ ಪಡೆಯುವ ಬಗ್ಗೆ.

ನಿರ್ಣಯ: 2020-21ನೇ ಸಾಲಿನಿಂದಿ 2021- 2022ನೇ ಸಾಲಿನವರೆಗೆ ಹಾಗೂ 2022-23ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಅಂಕಪಟ್ಟಿ ಮತ್ತು ಲೆಡ್ಜರ್ ವಹಿಗಳ ಮುದ್ರಣಕ್ಕಾಗಿ ಪ್ರಿಂಟರ್‌ಗಳಿಗೆ ತಗಲಿದ ಬಾಡಿಗೆಗೆ ವೆಚ್ಚ ಹಾಗೂ ವಿಶ್ವವಿದ್ಯಾನಿಲಯವೇ ಹೊಸ ಪ್ರಿಂಟರ್‌ನ್ನು ಖರೀದಿಸಿ ನಿರ್ವಹಣೆ ಮಾಡಿದಲ್ಲಿ ತಗಲುವ ವೆಚ್ಚದ ಬಗ್ಗೆ ತುಲಾನಾತ್ಮಕ ಮಾಹಿತಿಯನ್ನು ಮುಂದಿನ ಸಿಂಡಿಕೇಟು ಸಭೆಯ ಗಮನಕ್ಕೆ ತರಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ 2:16(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಆಡಳಿತ ಸೌಧ ಹಾಗೂ ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡಗಳ ಮತ್ತು ಶೌಚಾಲಯಗಳ ಶುಚಿತ್ವ ಕಾರ್ಯಕ್ಕಾಗಿ ಬೇಕಾಗಿರುವ ಶುಚಿತ್ವ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ಸಾ.ಸ 2:17(2024)**

ವಿಷಯ: ನೂತನ ಕೊಡಗು ವಿಶ್ವವಿದ್ಯಾನಿಲಯದ ಸ್ಥಾಪನೆ -ಅಭಿಮತದ ಆಯ್ಕೆಗನುಸಾರ ನೂತನ ಕೊಡಗು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾಗಲು ಇಚ್ಛಿಸುವ ಮತ್ತು ಇಚ್ಛಿಸದ ಖಾಯಂ

| | |
|---|---|
| | ಬೋಧಕ/ಬೋಧಕೇತರ ಸಿಬ್ಬದಿಗಳ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |
| **ಕಾರ್ಯಸೂಚಿಸಂಖ್ಯೆ:** | **ಆಡಳಿತ ಸಾ.ಸ 2:18(2024)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಿಂದ ಒದಗಿಸಲಾದ ಮೂರು ವಾಹನಗಳನ್ನು ಸರಕಾರದ ಆದೇಶದಂತೆ ಕೊಡಗು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸುವ ಬಗ್ಗೆ ಮತ್ತು ವಿಶ್ವವಿದ್ಯಾನಿಲಯದಲ್ಲಿ 15 ವರ್ಷ ಪೂರೈಸಿರುವ ವಾಹನಗಳನ್ನು ಬಹಿರಂಗ ಹರಾಜು ಮಾಡುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | **ಸಾರ್ವತ್ರಿಕ: ಸಾ.ಸ 2:19(2024)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| ನಿರ್ಣಯ: | ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |
| **ಕಾರ್ಯಸೂಚಿಸಂಖ್ಯೆ:** | **ಸಾರ್ವತ್ರಿಕ: ಸಾ.ಸ 2:20(2024)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | **ಇಡಿ: ಸಾ.ಸ 2:21(2024)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇಂಟರ್ ನ್ಯಾಷನಲ್ ಹೌಸ್, ಕ್ಲಾಸ್ ರೂಂ ಕಾಂಪ್ಲೆಕ್ಷ್ ಹಾಗೂ ಅಡಿಟೋರಿಯಂ ಇಂಟೀರಿಯರ್ ವರ್ಕ್ಸ್ ಕಟ್ಟಡಗಳ ನಿರ್ಮಾಣ ಮಾಡುತ್ತಿರುವ ಗುತ್ತಿಗೆದಾರರು Arbitration ವ್ಯಾಜ್ಯ ಹೂಡಿರುವ ಬಗ್ಗೆ. |
| ನಿರ್ಣಯ: | ವ್ಯಾಜ್ಯ ಹೂಡಿರುವ ಬಗ್ಗೆ ಸಿಂಡಿಕೇಟು ಸಭೆಯ ಗಮನಕ್ಕೆ ತರಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | **ಕಾನೂನು ಘಟಕ: ಸಾ.ಸ 2:22(2024)** |
| ವಿಷಯ: | ಶ್ರೀಮತಿ ರಾಧಿಕಾ ಎಚ್. ಪಿ ಮತ್ತು 8 ಮಂದಿ ಇತರರು ಮಂಗಳೂರು |

ವಿಶ್ವವಿದ್ಯಾನಿಲಯ ಮತ್ತು ಇತರರ ವಿರುದ್ದ ರಾಜ್ಯ ಉಚ್ಛನ್ಯಾಯಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ :5156/2024 ಗೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

ನಿರ್ಣಯ: ರಿಟ್ ಅರ್ಜಿ ಯ ಬಗ್ಗೆ ಸಿಂಡಿಕೇಟು ಸಭೆಯ ಗಮನಕ್ಕೆ ತರಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು: ಸಾ.ಸ 2:23(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ: ಸಿಂಡಿಕೇಟು: ಸಾ.ಸ 2:24(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ: ಸಿಂಡಿಕೇಟು: ಸಾ.ಸ 2:25(2024)**

ವಿಷಯ: B.ASLP (Bachelor in Audiology and Speech Language Pathology) ಮತ್ತು M.Sc Audiology & M.Sc Speech Language and Pathology ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಪದವಿ ಮತ್ತು ಸ್ನಾತಕೋತ್ತರ ಆಡಿಯಾಲಜಿ & ಸ್ಪೀಚ್ ಲ್ಯಾಂಗ್ವೇಜ್ ಪಾಥಾಲಜಿ ಸಂಯುಕ್ತ ಅಧ್ಯಯನ ಮಂಡಳಿ ಎಂದು ಮರುನಾಮಕರಣಗೊಳಿಸಿ ರಚಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ: ಸಿಂಡಿಕೇಟು: ಸಾ.ಸ 2:26(2024)**

ವಿಷಯ: ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ: ಸಿಂಡಿಕೇಟು: ಸಾ.ಸ 2:27(2024)**

ವಿಷಯ: ಪದವಿ ಮಟ್ಟದ ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ .

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ: ಸಿಂಡಿಕೇಟು: ಸಾ.ಸ 2:28(2024)**

ವಿಷಯ: ಪದವಿ ಮಟ್ಟದ ಎಫ್.ಎನ್.ಡಿ ಮತ್ತು ಸ್ನಾತಕೋತ್ತರ ಫುಡ್ ಸೈನ್ಸ್ & ನ್ಯೂಟ್ರೀಷನ್ಸ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ: ಡಿಇವಿ: ಸಾ.ಸ 2:29(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Manipal Academy of Higher Education(MAHE) ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

ನಿರ್ಣಯ: ಸದರಿ ಆಸ್ಪತ್ರೆಯವರು ರೋಗಿಗಳಿಂದ ಸಂಗ್ರಹಿಸುವ ಶುಲ್ಕ ಹಾಗೂ ವಿಶ್ವವಿದ್ಯಾನಿಲಯವು ವಿಧಿಸುವ ಶುಲ್ಕ ಇವುಗಳ ನಡುವೆ ಇರುವ ವೆಚ್ಚ ವಿಶ್ಲೇಷಣೆಯನ್ನು ನಡೆಸಿ ಪೂರಕ ಮಾಹಿತಿಯನ್ನು ಸಿಂಡಿಕೇಟು ಸದಸ್ಯರ ಗಮನಕ್ಕೆ ತರಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ: ಸಾ.ಸ 2:30(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Bhima Gold Private Ltd., Bengaluru ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

ನಿರ್ಣಯ: ಒಡಂಬಡಿಕೆಯ Financial Arrangement ಕಾಲಂನಲ್ಲಿ ಸೂಕ್ತ ತಿದ್ದುಪಡಿಯೊಂದಿಗೆ ಅನುಮೋದಿಸಲಾಯಿತು ಹಾಗೂ ಈ ಬಗ್ಗೆ ಸಿಂಡಿಕೇಟು ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ: ಸಾ.ಸ 2:31(2024)**

ವಿಷಯ: ಜುಲೈ/ಆಗಸ್ಟ್ 2023ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು - ದಂಡನೆಯನ್ನು ದೃಢಪಡಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು

**ಕಾರ್ಯಸೂಚಿಸಂಖ್ಯೆ:** **ಆಡಳಿತ: ಸಾ.ಸ 2:32(2024)**

ವಿಷಯ: ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಈ ಆಸ್ಪತ್ರೆಯನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಹಾಗೂ ಶ್ರೀ ರವಿಶಂಕರ್ ಎಂ.ಎನ್., ಸಹಪ್ರಾಧ್ಯಾಪಕರು ಇವರ ವೈದ್ಯಕೀಯ ವೆಚ್ಚದ ಮರುಭರಣೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ: ಸಾ.ಸ 2:33(2024)**

ವಿಷಯ: ಸೈಂಟ್ ಫಿಲೋಮಿನಾ ಕಾಲೇಜು, ಪುತ್ತೂರು ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಆಡಳಿತ: ಸಾ.ಸ 2:34(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆ ಹಾಗೂ ಇತರ ಸಭೆಗಳಿಗೆ ಹಾಜರಾಗುವ ಅಧಿಕಾರೇತರ ಸದಸ್ಯರಿಗೆ ಮತ್ತು ಸರಕಾರಿ ಸೇವೆಯಲ್ಲಿರುವ ಸದಸ್ಯರುಗಳಿಗೆ ಪ್ರಯಾಣಭತ್ಯೆ/ದಿನಭತ್ಯೆ ಮತ್ತು ಉಪಸ್ಥಿತಿ ಭತ್ಯೆ ಪಾವತಿಸುವ ಬಗ್ಗೆ.

ನಿರ್ಣಯ: ಸಿಂಡಿಕೇಟು ಸದಸ್ಯರಿಗೆ ಪ್ರಯಾಣ ಭತ್ಯೆ/ಉಪಸ್ಥಿತಿ ಭತ್ಯೆ ಪಾವತಿಯ ಬಗ್ಗೆ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಯಾವ ದರದಲ್ಲಿ ಪಾವತಿಸಲಾಗುತ್ತಿದೆ ಎಂಬ ಪೂರಕ ಮಾಹಿತಿಯನ್ನು ಹಣಕಾಸು ಅಧಿಕಾರಿಯವರು ಪಡೆದು ಸಿಂಡಿಕೇಟು ಸದಸ್ಯರಿಗೆ ಇ-ಮೇಲ್ ಮೂಲಕ ಕಳುಹಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿಸಂಖ್ಯೆ:** **ಸಿಬ್ಬಂದಿ: ಸಾ.ಸ 2:35(2024)**

ವಿಷಯ: ಯುಜಿಸಿ ನಿಯಮಾವಳಿ 2018 ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ/ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ-ಸ್ಕ್ರೀನಿಂಗ್ ಕಂ ಇವ್ಯಾಲ್ಯುವೇಶನ್/ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ: ಸಾ.ಸ 2:36(2024)**

ವಿಷಯ: ಡಾ. ಡಿ. ಜೆ. ಮಾನಸ, ಸಹಾಯಕ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಅಂತರ್ ವಿಶ್ವವಿದ್ಯಾನಿಲಯ ನಿಯೋಜನೆಗೆ ಸಂಬಂಧಿಸಿ ವಿಶ್ವವಿದ್ಯಾನಿಲಯದ ಅಭಿಪ್ರಾಯ ನೀಡುವ ಬಗ್ಗೆ

ನಿರ್ಣಯ: ನಿಯೋಜನೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ : ಸಾ.ಸ 2:37(2024)**

ವಿಷಯ: ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಕ್ಕೆ ಸಂಯೋಜನಾಧಿಕಾರಿ ನೇಮಕಾತಿ ಆಯ್ಕೆ ಮಂಡಳಿಯ ಶಿಫಾರಸ್ಸಿನ ಬಗ್ಗೆ.

ನಿರ್ಣಯ: ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಕ್ಕೆ ಸಂಯೋಜನಾಧಿಕಾರಿ ನೇಮಕಾತಿ ಆಯ್ಕೆ ಪ್ರಕ್ರಿಯೆಯಲ್ಲಿ ನಿಯಮಾವಳಿಗಳನ್ನು ಅನುಸರಿಸಿಲ್ಲ ಎಂಬ ಸದಸ್ಯರ ಆಕ್ಷೇಪಣೆ ಹಿನ್ನೆಲೆಯಲ್ಲಿ ನೇಮಕಕ್ಕೆ ಸಂಬಂಧಿಸಿದ ದಾಖಲೆ/ಕಡತಗಳನ್ನು ಮರುಪರಿಶೀಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ: ಸಾ.ಸ 2:38(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಯಂ ನೆಲೆಯಲ್ಲಿ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಯ ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ: ಸಾ.ಸ 2:39(2024)**

ವಿಷಯ: ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ಬಾಹ್ಯ ಪರೀಕ್ಷೆಗಳು ನಡೆಸಿದಲ್ಲಿ ಅಂತಹ ಪರೀಕ್ಷೆಯ ಹಣಕಾಸು ಸ್ವೀಕೃತಿ ಮತ್ತು ಪಾವತಿಗಳನ್ನು ನಿರ್ವಹಿಸಲು ಕುಲಸಚಿವ(ಪರೀಕ್ಷಾಂಗ)ದವರು ಪ್ರತ್ಯೇಕ ಖಾತೆಯನ್ನು ತೆರೆಯದೆ ವಿಶ್ವವಿದ್ಯಾನಿಲಯದ ಖಾತೆಯಿಂದಲೇ ನಿರ್ವಹಿಸುವಂತೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

ಲೆಕ್ಕ ಪರಿಶೋಧಕರ ಆಕ್ಷೇಪಣೆಯಲ್ಲಿ ಸೂಚಿಸಿರುವ ಮೊತ್ತ ವಸೂಲಾತಿಗೆ ಕ್ರಮ ಕೈಗೊಳ್ಳುವ ಬಗ್ಗೆ ಹಣಕಾಸು ಅಧಿಕಾರಿಯವರಿಗೆ ಪೂರಕ ಮಾಹಿತಿಯನ್ನು ಕ್ರೋಢಿಕರಿಸಿ ಸಿಂಡಿಕೇಟು ಸಭೆಗೆ ಮಂಡಿಸಲು ಸೂಚಿಸಲಾಯಿತು.

ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ ಪ್ರಾಧ್ಯಾಪಕರು CAS ನಲ್ಲಿ ಪದೋನ್ನತಿ ನೀಡುವಾಗ ಯುಜಿಸಿ/ಸರ್ಕಾರದ ನಿಯಮಾವಳಿಯಂತೆ ಪರಿಶೀಲಿಸುವುದು. ಯಾವುದೇ ಸಂದರ್ಭದಲ್ಲೂ Double Benefit ಆಗದ ಹಾಗೆ ಕ್ರಮವಹಿಸುವುದು

ಸಿಂಡಿಕೇಟ್/ಶೈಕ್ಷಣಿಕ ಮಂಡಳಿ ಹಾಗೂ ಇನ್ನಿತರ ಉಪಸಮಿತಿಗಳ ಪಟ್ಟಿಗಳನ್ನು ತಯಾರಿಸುವಾಗ ಹಾಗೂ ಸಭೆಗಳಿಗೆ ಹಾಜರಾಗುವ ಸದಸ್ಯರುಗಳೊಡನೆ ವ್ಯವಹರಿಸುವಾಗ ವಿಶ್ವವಿದ್ಯಾನಿಲಯದ ಸಿಬ್ಬಂದಿ ವರ್ಗದವರು ಶಿಷ್ಟಾಚಾರ ಪಾಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು: ಸಾ.ಸ 2:40(2024)**

ವಿಷಯ: ಶ್ರೀ ಸಿ.ಎ ನಿತಿನ್ ಶೆಟ್ಟಿ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ

ನಿರ್ಣಯ: ಚಾರ್ಟೆರ್ಡ್ ಅಕೌಂಟೆಂಟ್‌ರಿಂದ ವಿಶ್ವವಿದ್ಯಾನಿಲಯದ ಹಣಕಾಸು ಖಾತೆಗಳ ಲೆಕ್ಕಪರಿಶೋಧನೆ ನಡೆಸುವ ಬಗ್ಗೆ ಹಣಕಾಸು ಅಧಿಕಾರಿಯವರು ಇತರ ವಿಶ್ವವಿದ್ಯಾನಿಲಯಗಳಿಂದ ಮಾಹಿತಿ ಪಡೆದು ಸೂಕ್ತ ನಿರ್ಧಾರ ಕೈಗೊಳ್ಳಲು ಅನುಕೂಲವಾಗುವಂತೆ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು: ಸಾ.ಸ 2:41(2024)**

ವಿಷಯ: ಶ್ರೀ ಅಚ್ಯುತ ಗಟ್ಟಿ ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

ನಿರ್ಣಯ:

1. ನಾರಾಯಣ ಗುರು ಅಧ್ಯಯನ ಪೀಠದ ಕಟ್ಟಡ ಕಾಮಗಾರಿಗೆ ಸರಕಾರ/ಸಂಸದರ/ವಿಧಾನ ಪರಿಷತ್ ಸದಸ್ಯರ ಪ್ರದೇಶಾಭಿವೃದ್ಧಿ ಅನುದಾನಲ್ಲಿ ಮಂಜೂರಾಗಿರುವ/ವೆಚ್ಚವಾಗಿರುವ ಮಾಹಿತಿಯನ್ನು ಅನುದಾನದ ಬಗ್ಗೆ ಮಾಹಿತಿ ಹಾಗೂ ನಿರ್ಮಿತಿ ಕೇಂದ್ರ ದಿಂದ ಕಾಮಗಾರಿಯ ಪ್ರಗತಿ ವರದಿಯನ್ನು ಪಡೆದು ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.
2. ಎನ್.ಎಸ್.ಎಸ್ ಘಟಕದ ಮೂಲಕ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಗಿಡಗಳನ್ನು ನೆಡುವ/ಸ್ವಚ್ಛತೆ ಕೈಗೊಳ್ಳುವ ಕುರಿತು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
3. ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ಟೆಂಡರ್ ಕರೆದು ಕ್ರಮ ಕೈಗೊಳ್ಳಲಾಗುವುದು.

4. ಎನ್.ಎಸ್.ಎಸ್ ವಾರ್ಷಿಕ ಶಿಬಿರಗಳನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಮ್ಮಿಕೊಳ್ಳುವಂತೆ ಸೂಚಿಸಲಾಗುವುದು.
5. ಕೊಣಾಜೆ ಪಂಚಾಯತ್ ಬಳಿಯಿರುವ ಆಟದ ಮೈದಾನದಲ್ಲಿ ಸುರಕ್ಷತೆ ದೃಷ್ಠಿಯಿಂದ ಕೆಲವು ಷರತ್ತುಗಳನ್ನು ವಿಧಿಸಿ ಅವಕಾಶ ನೀಡಬಹುದೆಂದು ನಿರ್ಣಯಿಸಲಾಯಿತು.
6. ವಿಶ್ವವಿದ್ಯಾನಿಲಯ ಆವರಣದ ತ್ಯಾಜ್ಯ ವಿಲೇವಾರಿ ಬಗ್ಗೆ ಕೊಣಾಜೆ ಪಂಚಾಯತ್‌ನ ಸಹಾಯ ಪಡೆಯುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿಸಂಖ್ಯೆ:** **ಸಿಂಡಿಕೇಟು: ಸಾ.ಸ 2:42(2024)**

ವಿಷಯ: ಪ್ರೊ. ಎಂ. ಜಯಶಂಕರ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ

ನಿರ್ಣಯ: ಸೇವಾ ನಿಯಮ ಮತ್ತು ಕಾನೂನು ರೀತಿ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು: ಸಾ.ಸ 2:43(2024)**

ವಿಷಯ: ಪ್ರೊ. ಎಂ. ಜಯಶಂಕರ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ಪ್ರೊ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇವರ ಸೇವೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗಕ್ಕೆ ಈ ಕೆಳಗಿನ ಅಂಶಗಳ ಆಧಾರದ ಮೇಲೆ ವರ್ಗಾಯಿಸುವ ನಿರ್ಣಯವನ್ನು ಕೈಗೊಳ್ಳಲು ಅಭಿಪ್ರಾಯಿಸಿದೆ.

1. ಸ್ನಾತಕೋತ್ತರ ಕೇಂದ್ರ ಚಿಕ್ಕ ಆಳುವಾರದಲ್ಲಿ ಪೂರ್ಣಕಾಲಿಕವಾಗಿ ಇನ್ನೂ ನಾಲ್ಕು ಬೋಧಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಅಗತ್ಯ ಕಾರ್ಯಭಾರದ ಕೊರತೆ.

2. ಮಂಗಳಗಂಗೋತ್ರಿಯಲ್ಲಿರುವ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗದಲ್ಲಿ ಕಾರ್ಯಭಾರವಿದ್ದರೂ ಖಾಯಂ ಪ್ರಾಧ್ಯಾಪಕರು ಇಲ್ಲದೆ ಇರುವುದು.

3. ಕೊಡಗು ವಿಶ್ವವಿದ್ಯಾನಿಲಯವು ಪ್ರೊ. ಎಂ. ಜಯಶಂಕರ್‌ರವರನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸುವ ಕುರಿತು ನೀಡಿರುವ ನಿರಾಕ್ಷೇಪಣಾ ಪತ್ರ.

4. ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ NAAC ಮಾನ್ಯತೆ ಹಿತದೃಷ್ಟಿಯಿಂದ ಪೂರ್ಣಕಾಲಿಕ ಪ್ರಾಧ್ಯಾಪಕರ ಅವಶ್ಯಕತೆ ಕಂಡು ಬಂದಿದ್ದು, ಈ ವರ್ಗಾವಣೆಯಿಂದ ವಿಭಾಗದ ಶೈಕ್ಷಣಿಕ ಹಾಗೂ ಸಂಶೋಧನೆಗೆ ಅನುಕೂಲವಾಗುತ್ತದೆ.

5. ಪ್ರೊ. ಎಂ. ಜಯಶಂಕರ್‌ರವರು ದಿನಾಂಕ 30.04.2026 ರಂದು ವಯೋನಿವೃತ್ತಿ ಹೊಂದಲಿದ್ದು ಕೇವಲ ಎರಡು ವರ್ಷಗಳಿಗಿಂತಲೂ ಕಡಿಮೆ ಸೇವಾವಧಿಯನ್ನು ಹೊಂದಿರುತ್ತಾರೆ.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಸಾ.ಸ 2:44(2024)**

ವಿಷಯ: ಪರೀಕ್ಷಾ ಅವ್ಯವಹಾರ ಸಂಬಂಧಿ Ordinance ನ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ:** **ಡಿಇವಿ:ಸಾ.ಸ 2:45(2024)**

ವಿಷಯ: Father Muller Homoeopathic Medical College ಇವರೊಂದಿಗೆ ಒಡಂಬಡಿಕೆ ಅವಧಿ ಮುಂದುವರಿಸುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ:** **ಡಿಇವಿ:ಸಾ.ಸ 2:46(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗಕ್ಕೆ ಅಗತ್ಯವಿರುವ ರಾಸಾಯನಿಕ/ಗ್ಲಾಸ್ ವೇರ್ ಮತ್ತು ಉಪಯೋಗಿ ವಸ್ತುಗಳನ್ನು ಖರೀದಿಸುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗ ಹಾಗೂ ವಿಶ್ವವಿದ್ಯಾನಿಲಯದ ಇನ್ನಿತರ ವಿಭಾಗಗಳಿಗೂ ಅನ್ವಯಿಸುವಂತೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು: ಸಾ.ಸ 2:47(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ:ಸಾ.ಸ 2:48(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ, ಗಣಕಯಂತ್ರ ಕೇಂದ್ರದ AMC of Newworking Devices, Wi-Fi Devices ಮತ್ತು Firewall ಗಳ ವಾರ್ಷಿಕ ನಿರ್ವಹಣಾ ಗುತ್ತಿಗೆ ಅವಧಿಯನ್ನು ವಿಸ್ತರಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:** **ಡಿಇವಿ:ಸಾ.ಸ 2:49(2024)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ವಿವಿಧೋದ್ದೇಶ ಸಹಕಾರಿ ಸಂಘ(ನಿ) ಮೂಲಕ ನಿರ್ವಹಿಸಲ್ಪಡುತ್ತಿರುವ ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಮಂಗಳಾ ಕ್ಯಾಂಟೀನ್, ಕಾವೇರಿ ಅತಿಥಿಗೃಹಗಳ ನಿರ್ವಹಣಾ ಅವಧಿಯ ವಿಸ್ತರಣೆ ಬಗ್ಗೆ.

ನಿರ್ಣಯ: ಟೆಂಡರ್ ಕರೆಯಲು ತೀರ್ಮಾನಿಸಲಾಯಿತು. ಅಲ್ಲಿಯವರೆಗೂ ಪ್ರಸ್ತುತ ಇರುವ ವ್ಯವಸ್ಥೆಯನ್ನು ಮುಂದುವರಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು:ಸಾ.ಸ 2:50(2024)**

ವಿಷಯ: ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ

ನಿರ್ಣಯ: ಈ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು. Credit Pattern ಬಗ್ಗೆ ಯುಜಿಸಿ ನಿಯಮಾವಳಿಯಂತೆ ಅನುಷ್ಠಾನಗೊಳಿಸುವ ಸಲುವಾಗಿ BOS ಸಮಿತಿಗಳಲ್ಲಿ ಕೂಡಲೇ ಪರಿಶೀಲನೆ ನಡೆಸಲು ನಿರ್ಣಯಿಸಲಾಯಿತು.

ಸರ್ಕಾರಿ/ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿ ಕನಿಷ್ಠ ಪರಿಮಿತಿಯ ಕುರಿತು ಹಾಗೂ ಅತಿಥಿ ಉಪನ್ಯಾಸಕರ ಕಾರ್ಯಭಾರದ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ:ಸಾ.ಸ 2:51(2024)**

ವಿಷಯ: 2024-25ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಅಗತ್ಯವಿರುವ ಪರೀಕ್ಷಾ ನಮೂನೆ/ ಲಕೋಟೆ/ಲೇಖನ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ

ನಿರ್ಣಯ: ಇನ್ನು ಮುಂದಕ್ಕೆ ಖರೀದಿಗೆ ಸಂಬಂಧಿಸಿದ ಕಾರ್ಯಸೂಚಿಯನ್ನು ಘಟನೋತ್ತರ ಅನುಮೋದನೆಗೆ ಮಂಡಿಸದೆ ಮುಂಚಿತವಾಗಿಯೇ ಪೂರ್ವಾನುಮತಿ ಪಡೆಯಲು ನಿಗದಿತ ಅವಧಿಯ ಒಳಗೆ ಸಿಂಡಿಕೇಟು ಸಭೆಗೆ ಮಂಡಿಸತಕ್ಕದ್ದು ಎಂಬ ಸೂಚನೆಯ ಮೇರೆಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ:ಸಾ.ಸ 2:52(2024)**

ವಿಷಯ: 2024-25ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಅಗತ್ಯವಿರುವ ಉತ್ತರ ಪತ್ರಿಕೆಗಳನ್ನು ಖರೀದಿಸುವ ಬಗ್ಗೆ

ನಿರ್ಣಯ: ಇನ್ನು ಮುಂದಕ್ಕೆ ಖರೀದಿಗೆ ಸಂಬಂಧಿಸಿದ ಕಾರ್ಯಸೂಚಿಯನ್ನು ಘಟನೋತ್ತರ ಅನುಮೋದನೆಗೆ ಮಂಡಿಸದೆ ಪೂರ್ವಾನುಮತಿ ಪಡೆಯಲು ಮುಂಚಿತವಾಗಿಯೇ ಸಿಂಡಿಕೇಟು ಸಭೆಗೆ ಮಂಡಿಸತಕ್ಕದ್ದು ಎಂಬ ಸೂಚನೆಯ ಮೇರೆಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ:ಸಾ.ಸ 2:53(2024)**

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ಪ್ರಭಾರ ಪ್ರಾಂಶುಪಾಲರನ್ನು ನೇಮಕ ಮಾಡಿದ ಬಗ್ಗೆ.

ನಿರ್ಣಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ನೂತನ ಪ್ರಾಂಶುಪಾಲರ ನೇಮಕಾತಿಯ ಬಗ್ಗೆ ಸಿಂಡಿಕೇಟಿನ ಈ ಕೆಳಕಂಡ ಉಪಸಮಿತಿಯನ್ನು ರಚಿಸಿ ನಿಯಮಾವಳಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

| | |
|---|---|
| ಪ್ರೊ. ಎಂ. ಜಯಶಂಕರ್ | - ಅಧ್ಯಕ್ಷರು |
| ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | - ಸದಸ್ಯರು |
| ಡಾ. ಕೆ.ಸಿ. ಮಹದೇಶ | - ಸದಸ್ಯರು |
| ಶ್ರೀ ಸುರೇಶ್ ಕುಮಾರ್ ಬಿ. ನಾವೂರು | - ಸದಸ್ಯರು |
| ಶ್ರೀ ರಘುರಾಜ್ | - ಸದಸ್ಯರು |
| ಶ್ರೀಮತಿ ಜೂಡಿತ್ ಮೆಂಡೋನ್ಸ | - ಸದಸ್ಯರು |
| ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ | - ಸದಸ್ಯ ಕಾರ್ಯದರ್ಶಿ |

ನೂತನ ಪ್ರಾಂಶುಪಾಲರ ನೇಮಕಾತಿವರೆಗೆ ಡಾ. ಗಣಪತಿ ಗೌಡ, ಇವರನ್ನು ಪ್ರಭಾರ ಪ್ರಾಂಶುಪಾಲರಾಗಿ ಮುಂದುವರಿಸಲು ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಕಾಲೇಜುಗಳ ಸಂಯೋಜನೆ ಬಗ್ಗೆ ಹಾಗೂ ವಿಶ್ವವಿದ್ಯಾನಿಲಯದ ಹಣಕಾಸಿನ ಸ್ಥಿತಿಗತಿಯ ಬಗ್ಗೆ ಮಾತ್ರ ಚರ್ಚಿಸಲು ದಿನಾಂಕ 21.06.2024 ರಂದು ಸಿಂಡಿಕೇಟು ಸಭೆ ನಡೆಸಲು ನಿರ್ಣಯಿಸಲಾಯಿತು.

2. ಕುದ್ಮುಲ್ ರಂಗರಾವ್ ಜಯಂತಿಯನ್ನು ವಿಶ್ವವಿದ್ಯಾನಿಲಯದಲ್ಲಿ ಆಚರಿಸಲು ಹಾಗೂ ಈ ಬಗ್ಗೆ ಕಾಲೇಜುಗಳಿಗೆ ಸುತ್ತೋಲೆಯನ್ನು ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು.
3. ಸಿಂಡಿಕೇಟು ಸದಸ್ಯರುಗಳಿಗೆ ಗುರುತು ಚೀಟಿಗಳನ್ನು ಹೊಸ ಮಾದರಿಯಲ್ಲಿ ನೀಡಲು ನಿರ್ಣಯಿಸಲಾಯಿತು.
4. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆ ಹಾಗೂ ಹಾಗೂ ವಿವಿಧ ಸಮಿತಿ ಸಭೆಗಳಿಗೆ ಹಾಜರಾಗುವ ಸಿಂಡಿಕೇಟ್ ಸದಸ್ಯರಿಗೆ ಪ್ರಯಾಣ ಭತ್ಯೆಯನ್ನು ಪ್ರತಿ ಕಿ.ಮೀ. ಗೆ ರೂ. 12.00 ರಿಂದ ರೂ. 16.00 ಕ್ಕೆ ಹಾಗೂ ಉಪಸ್ಥಿತಿ ಭತ್ಯೆಯನ್ನು ರೂ. 5000.00 ದಿಂದ ರೂ. 8000.00 ಕ್ಕೆ ಹೆಚ್ಚಿಸಲು ನಿರ್ಣಯಿಸಲಾಯಿತು.

ಮಾನ್ಯ ಕುಲಸಚಿವರು ಮಾನ್ಯ ಕುಲಪತಿಯವರಿಗೆ ಹಾಗೂ ಸಿಂಡಿಕೇಟು ಸಭೆಯ ಎಲ್ಲಾ ಸದಸ್ಯರುಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು.

**ಕುಲಸಚಿವರು** **ಕುಲಪತಿಗಳು**